ಕಡೂರು ಡಿವಿಜ್.

ಪ್ರಸಿದ್ಧ ಪತ್ರಿಕೆ.

I. ಕಡೂರು ತಾಲ್ಲೂಕು ರಿಜಿಸ್ಟರ್ 496ನೇ ನಂಬರು ಷಿಗಟೆಕೆರೆ ತಲಾವ್ ಕಾಂಗಾರಿ ಉದ್ದಿಶ್ಯ 1890ನೇ ಇಸವಿ ಜುಲೈ ಮಾಹೆ 31ನೇ ತಾರೀಖು ವರಿವಿಗೂ ದರಖಾಸ್ತುಗಳು ಕಡೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೆಬರವರಿಂದ ತೆಗದುಕೊಳ್ಳಲ್ಪಡುತ್ತವೆ. ಈ ಕೆಳಗೆ ಕಂಡ ಅಂದಾಜಿನಲ್ಲಿನ ಐಟಂಗಳ ವೊತ್ತವನ್ನ ಕಾಣಿಸಲ್ಪಟ್ಟಿರುತ್ತದೆ. ಇದು ನಿಷ್ಕರ್ಷೆಯಾದದ್ದಾಗಿರುವದಿಲ್ಲಾ. ಕಾಂಗಾರಿಯು 1891ನೇ ಇಸವಿ ಮಾರ್ಚಿ ತಿಂಗಳು ಆಖೈರೊಳಗಾಗಿ ಪೂರೈಸತಕ್ಕದ್ದು.

II. ಷ್ಟಾ ಮತ್ತು ಅಂದಾಜು ಪರತ್ತು ವಗೈರೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ ಆಫಿಸಿನಲ್ಲಿ ಪ್ರಾತಃಕಾಲ 11 ಘಂಟೆ ಲಾಗಾಯತು ಸಾಯಂಕಾಲ 4 ಘಂಟೆ ವರಿವಿಗೆ ನೋಡಲು ಅವಕಾಶ ಕೊಡಲ್ಪಡುತ್ತೆ.

III. ದರಖಾಸ್ತುಗಳು ಅಚ್ಚು ಹಾಕಿದ ಫಾರಂನಲ್ಲಿ ಬರಿಯಬೇಕು. ಈ ಫಾರಂಗಳು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸಿನಲ್ಲಿ ದೊರಿಯುತ್ತವೆ. ಈ ಕೆಳಗೆ ಕಾಣಿಸಲ್ಪಟ್ಟಿರುವ ಸ್ಟೇಟ್‌ಮೆಂಟ್ ಪ್ರಕಾರ ಬಂದು ಸ್ಟೇಟ್‌ಮೆಂಟ್ ಲಗತ್ತು ಮಾಡಿರಬೇಕು. ಅದರಲ್ಲಿ ಕಂಟ್ರಾಕ್ಟುದಾರನು ಯಾವ ರೇಟ್ ಪ್ರಕಾರ ಪ್ರತಿ ಐಟಂಗಳ ಕೆಲಸವನ್ನು ಮಾಡಿಸಬಲ್ಲನೋ ಆ ರೇಟಿನ್ನು ಅಥವಾ ಆ ದರವನ್ನು ನಮೂದು ಮಾಡಬೇಕು.

ಫಾರಂ

ಕೆಲಸದ ವಿವರ	ಕ್ಕೆ	ವೊತ್ತ	ಕಂಟ್ರಾಕ್ಟುದಾರ ಕೆಲಸಮಾಡುವದಕ್ಕೆ ವಪ್ಪುವ ದರ.
ಮಣ್ಣು ಕೆಲಸ	ಸಲೆಗಜ 1ಕ್ಕೆ	16000	
ಕಲ್ಲು ಕೆಲಸ		(ತಪಶೀಲ್ ಬಗ್ಯೆ ಮುಂದೆ ನೋಡತಕ್ಕದ್ದು)	

IV. ಪ್ರತಿ ಬಂದು ದರಖಾಸ್ತಿನ ಸಂಗಡಲೂ 50 ರೂಪಾಯಿಗಳ ಕರೆನ್ಸಿ ನೋಟುಗಳಾಗಲಿ, ಗವರ್ನಮೆಂಟ್ ಪ್ರಾಂಸರಿ ಆಗಲಿ ಅಥವಾ ನಗದಾಗಲಿ ಡಿಪಾಜಿಟ್ ಹಣವನ್ನು ಶೇವಣಾತಿಯಾಗಿ ಹಾಜರ್ಮಾಡಬೇಕು, ಮತ್ತು ಲಖೋಟೆ ಮೇಟೆ ಷಿಗಟೆಕೆರೆ ತಲಾವ್ ಕಾಂಗಾರಿ ಬಗ್ಯೆ ದರಖಾಸ್ತೆಂಬದಾಗಿ ಬರಿಯಬೇಕು, ತಪ್ಪಿದಲ್ಲಿ ಅಂಥಾ ದರಖಾಸ್ತುಗಳನ್ನ ತಿರಸ್ಕರಿಸಲಾದೀತು.

V. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡತಕ್ಕದ್ದಕ್ಕೆ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರು ಸ್ವತಂತ್ರರಾಗಿರುತ್ತಾರೆ. ಹಾಗೆ ಮಂಜೂರ್ಮಾಡತಕ್ಕದ್ದರಲ್ಲಿ ಕೀಳ್ಪಟ್ಟ ದರಖಾಸ್ತನ್ನೇ ಆಗಲಿ ಅಥವಾ ಯಾವದೇ ಆಗಲಿ ವಪ್ಪುಕೊಳ್ಳಬೇಕೆಂಬ ನಿರ್ಬಂಧವಿರುವದಿಲ್ಲ ಮತ್ತು ತಿರಸ್ಕರಿಸಿದ ದರಖಾಸ್ತುಗಳಿಗೆ ಕಾರಣಗಳನ್ನು ಕೊಡುವದಿಲ್ಲಾ.

VI. ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿದ 8 ದಿನಗಳ ವಳಗಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಕಂಟ್ರಾಕ್ಟು ಬಾಂಡ್ ಎಂಬ ಕರಾರು ಪತ್ರವನ್ನ ಬರದುಕೊಡಬೇಕು. ತಪ್ಪಿದಲ್ಲಿ ಅವನ ದರಖಾಸ್ತು ರದ್ದುಮಾಡಲ್ಪಟ್ಟು ಶೇವಣಾತಿ ಹಣವನ್ನ ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

VII. ಮಂಜೂರಾದ ದರಖಾಸ್ತುದಾರನ ಹೆಸರು ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫಿಸ್ ಮುಂಭಾಗದಲ್ಲಿ ನೋಟಿಸ್ ಬೋರ್ಡ್ ಮೇಲೆ ಬರದು ಚಿಕಟಾಯಿಸಲ್ಪಡುತ್ತೆ. ಅಂಗೀಕರಿಸಿದ ಅಥವಾ ತಿರಸ್ಕರಿಸಿದ ದರಖಾಸ್ತುದಾರರುಗಳ ವಿಷಯದಲ್ಲಿ ಯಾವದೊಂದು ಜವಾಬ್ ದೊರಿಯಲಾರದು.

VIII ಯಾವದಾದರೂ ದರಖಾಸ್ತು ಮಂಜೂರಾದನಂತರ ತಿರಸ್ಕರಿಸಲ್ಪಟ್ಟ ದರಖಾಸ್ತುದಾರರ ಹಣವನ್ನ ಅವರಿಗೆ ವಾಪಸ್‌ಮಾಡಲ್ಪಡುತ್ತೆ.

ಚಿಕ್ಕಮಗಳೂರು ತಾರೀಖು 7ನೇ ಮಾಹೆ ಜುಲೈ 1890ನೇ ಇಸವಿ.

ತಪಶೀಲ್.

ಕೆಲಸದ ವಿವರ.	ಕ್ಕೆ	ಮೊತ್ತಾ.	ಕಂಟ್ರಾಕ್ಟ್ದಾರ ಕೆಲಸ ಮಾಡುವದಕ್ಕೆ ವಪ್ಪುವ ದರ.
ಮಟ್ಟಿಕಾಂಗಾರಿ ನೀರು ಹಾಕಿ ದಮ್ಮಸ್ಸು ಮಾಡುವದು ಸಹಿತ ..	ಸಲೆಗಜ	22,823	
ಹಳೇಕಾಡು ಕಲ್ಲುಕೆಲಸ ಕಿತ್ತು ಹಾಕಿ ಪುನಹಾ ಕಟ್ಟುವಿಕೆ ..	ಡಿಟೋ	1,704	
ಹೊಸಕಾಡು ಕಲ್ಲುಕೆಲಸ	ಡಿಟೋ	1,808	
ಗ್ರೇಡ್ ಕಲ್ಲು	ವಂದಕ್ಕೆ	43	
ಬೆಂಟ್ ವೊರ್ಕ್ ಕಲ್ಲು	ಡಿಟೋ	2	
ಮಟ್ಟ ಕೆಲಸ ಅಗತೆ ಪಟ್ಟ ಭೂಮಿ	ಸಲೆಗಜ	393	
ಸುಟ್ಟ ಯಿಟಿಕೆ ಸುರ್ಕಿಗಾರೆ ಮತ್ತು ಕಬ್ಬಾ ಗಿಲಾವು	ಚದರ	1·50	
ಸುಟ್ಟಕಲ್ಲು ಹಲಿಗೆಗಳು	ಚದರ ಅಡಿ	742	

ಡಿ. ಸೀತಾರಾಮರಾವ್, ಎಗ್ಜಿಕ್ಯೂಟಿವ್ ಇಂಜಿನಿಯರ್.

ಗೈ ರ ವಿ ಲಾ

ಆದ ಕರ್ಣಿ ನೋಟಿನ

ನಂ.	ಸರ್ಕಲ್	ಕ್ರಯ	ಸ್ವಂತಗಾರ
I 20—47384	ಮದರಾಸ್	ರೂ. 100	ಮೈಸೂರು ಸ್ಪೇಷ್ಯಲ್ ಮಾಸ್ಟರ್ ಮೆಸ್ಟರ್ ಜಿ. ಮೆಯಿಲ್.
	ಮರುಕಂ 8—9—88		

ಗವರ್ಮೆಂಟ್ ತಯಾರೀ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥ ವಾಗಿ ಗವರ್ಮೆಂಟ್ ಆಫಿಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಂಡುಗಳು ತೆಗದುಕೊಳ್ಳುವ ಯಾವ ಮನುಷ್ಯ ನಾದರೂ ಕಲ್‌ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರಿಂಟೆಂಡೆಂಟರ ದೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡುಕೊಳ್ಳಬೇಕಾಗಿರುತ್ತೆ. ನಾಲ್ಕು ಔನ್ಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 3—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ 7—4—0; ಬಂದು ಪೌಂ ಔಷಧವುಳ್ಳ ಡಬ್ಬಿಗೆ ರೂ. 14—0—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸಬಹುದು; ನಾಲ್ಕು ಔನ್ಸ್‌ವುಳ್ಳ ಡಬ್ಬಿ ಬಂದಕ್ಕೆ ರೂ. 4—14—0; ಎಂಟು ಔನ್ಸ್‌ವುಳ್ಳ ಡಬ್ಬಿಗೆ ರೂ. 9—4—0; ಬಂದು ಪೌಂವುಳ್ಳ ಡಬ್ಬಿಗೆ 17 ರೂ. 8 ಆಣೆ; ಈ ಔಷಧವನ್ನ ಕಲ್‌ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ವ ನೇಟಿವ್ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ, ಸದರೀ ಕಿಮ್ಮತಿನೊಂದಿಗೆ ದರ 4 ಔನ್ಸ್ ತಗರದ ಡಬ್ಬಿಗೆ 4 ಆಣೆಯೂ, 8 ಔನ್ಸ್ ತಗರದ ಡಬ್ಬಿಗೆ 8 ಆಣೆ ಟಪ್ಪಾಲ್ ಹಾಸಲೂ, ಬಂದು ಪೌಂ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.

ಸ್ವಂತ ಪ್ರಕಟನೆ.

ನೋ ಟಿ ಸ್.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕಂಟೋಮೆಂಟ್ ಶೇಟೆ ಮೇರಿ ರೋಡಿನಲ್ಲಿ ಪೂರ್ವಕ್ಕೆ ಅಲ್ಲಿಪಕ್ಕ ಮನೆ, ದಕ್ಷಿಣಕ್ಕೆ ಮರ್ಕಾ, ಪಶ್ಚಿಮಕ್ಕೆ ಮೇರಿ ರೋಡು, ಪುತ್ತರಕ್ಕೆ ಪೆತ್ತದ ಕೆಲಸಮಾಡುವ ಷೇಕ್ ಇಸಮಾಇಲ್ ಅಂಗಡಿ ಈ ಮಧ್ಯೆಯಿರುವ 12ನೇ ನಂಬರು ಮನೆ ಯಿದಕ್ಕೆ ಕೇರಿದ ಅಂಗಡಿ ಸಹ ಈ ಮನೆಯಲ್ಲಿ ವಾಸವಾಗಿರುವ ತುಳಸಾಬಾಯಿ ಯಂಬವಳು ಮಾರುತ್ತಾಳೆಂದು ವರ್ತಮಾನ ತಿಳಿಯಬಂದದ್ದರಿಂದ ಈಕೆ ಜೀವನಾಂಶಕ್ಕೆ ಅರ್ಹಳಾಗಿಯೂ ಸಂತಾನಯಿಲ್ಲದವಳಾಗಿಯೂ ವೆಧೆವೆಯಾಗಿಯೂ ಯಿರುವದ್ದರಿಂದ ಕ್ರಯ, ಭೋಗ್ಯ, ಆಧಾರ, ದಾನ, ವಗೈರೆ ಈ ತುಳಸಾಬಾಯಿಯು ಅನ್ಯತ್ರ ಮಾಡುವದಕ್ಕೆ ಈಕೆಗೆ ಯಾವ ಹಕ್ಕೂ ಯಿರುವದಿಲ್ಲ. ಈ ಅವಿಭಕ್ತ ಕುಟುಂಬದ ಈ 12ನೇ ನಂಬರ್ ಮನೆಗೆ ಸ್ವಂತ ಹಕ್ಕುದಾರನಾದ ಈ ಕೆಳಗೆ ರುಜು ಮಾಡಿರುವ ನನ್ನ ಅನುಮತಿಯಿಲ್ಲದೆ ಸದರೀ ನನ್ನ ಚಿಕ್ಕಮ್ಮನಾದ ತುಳಸಾಬಾಯಿ ಯಿಂದ ಯಾರೂ ಯಾವ ವಿಧವಾಗಿ ಪಡದಾಗ್ಯೂ ಅವರಿಗೆ ಈ ಮನೆ ಮೇಲೆ ಲೇಶಾಂಶವಾದರೂನ್ನೂ ಹಕ್ಕು ಉಂಟಾಗಲಾರದೆಂದು ಸಾಫ಼ ಸೂಚಿಸಿದೆ.

ತಾರೀಖು 11ನೇ ಜುಲೈ 1890ನೇ ಇಸವಿ.

ಬೆಂಗಳೂರು ಮೊರಕಟ್ಟೆನಲ್ಲಿರುವ ಸುಣ್ಣೇಕೆಲಸದ
ರಾಮುಂಗಿನ ಕಠಾರಿ ಗುರುತಿನ ರುಜು.